ಕೊಟ್ಟು, ಹಿಂದಿನದಿನ ಮಾಡಿದ್ದ ಕೋಡುಬಳೆ, ರವೆ ಉಂಡೆ ಕೊಟ್ಟಳು.

‘‘ಆಂಟಿ, ಅಮ್ಮ ಬಂದಿಲ್ವಾ?’’ ಅನಘಾ ಕೇಳಿದಳು.

‘‘ಈಗ ಮೈಸೂರು ಬಿಟ್ಟಿದ್ದಾರಂತೆ. ರಾತ್ರಿಯ ಒಳಗೆ ಬರ್ತಾರೆ.’’

‘‘ಅಮ್ಮ ಇಲ್ದಿದ್ರೆ ನಂಗೆ ತುಂಬಾ ಬೋರ್ ಅನ್ಸತ್ತೆ ಆಂಟಿ. ಅವರಿಲ್ಲದಿದ್ರೆ ನಂಗೆ ಮನೆಗೆ ಬರಕ್ಕೇ ಬೇಜಾರು’’ ಎಂದ ಅರುಣ್.

‘‘ನಂಗೂ ಅಷ್ಟೆ. ಒಂದೊಂದು ಸಲ ಅಮ್ಮ ಆರುಗಂಟೆಯಾದ್ರೂ ಬಂದಿರಲ್ಲ. ಆಗ ನನಗೆ ಎಷ್ಟು ಬೇಜಾರಾಗಿರತ್ತೆ ಗೊತ್ತಾ?’’

‘‘ಯಾಕೆ ಪುಟ್ಟ ಹಾಗಂತೀಯಾ? ನಿಮ್ಮ ಜೊತೆ ಅಜ್ಜಿ ಇರ್ತಾರಲ್ವಾ?’’

‘‘ಅಮ್ಮಮ್ಮ ಇರ್ತಾರೆ ನಿಜ. ಅವರು ನಮಗೆ ಬೇಕಾಗಿದ್ದೆಲ್ಲಾ ಮಾಡಿ ಕೊಡ್ತಾರೆ. ಆದ್ರೆ ಅಮ್ಮ ಇದ್ರೆ ಆ ಮಜಾನೇ ಬೇರೆ’’ ಎಂದ ಅರುಣ್.

‘‘ಅಮ್ಮ ನಮ್ಮನ್ನು ತುಂಬಾ ಮುದ್ದು ಮಾಡ್ತಾರೆ. ಕಥೆ ಹೇಳ್ತಾರೆ. ಹೋಂವರ್ಕ್ ಮಾಡಿಸ್ತಾರೆ. ಐ ಲವ್ ಹರ್’’ ಅನಘಾ ಕಣ್ಣು ಮುಚ್ಚಿಕೊಂಡು ಅಣ್ಣನನ್ನಪ್ಪಿ ಹೇಳಿದಳು.

ಭುವನಾ ಆ ದೃಶ್ಯ ನೋಡಿ ಮೂಕಳಾದಳು. ‘ನನ್ನ ಮಕ್ಕಳಿಂದ ಇಂತಹ ಆನಂದ ನಾನು ಕಸಿದುಕೊಂಡೆ ಅಲ್ಲವಾ? ಮಕ್ಕಳು ನನಗಾಗಿ ಅದೆಷ್ಟು ಹಂಬಲಿಸಿರಬಹುದು! ಅವರ ಸುಖ, ಸಂತೋಷ, ನೆಮ್ಮದಿ ಕಿತ್ತುಕೊಂಡ ಪಾಪಿ. ನಾನು.’

ಅವಳು ತನ್ನ ರೂಮ್‌ಗೆ ಹೋಗಿ ಬಾಗಿಲು ಹಾಕಿಕೊಂಡಳು. ಹತ್ತು ನಿಮಿಷ ಮೌನವಾಗಿ ಕುಳಿತು ಶಾಂತವಾಗಿ ಯೋಚಿಸಿದಾಗ ಅವಳಿಗೆ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಯಿತು. ಬೆಳಗ್ಗೆ ಮಾಡಿದ್ದ ಅನ್ನ, ಹುಳಿ, ಓವನ್‌ನಲ್ಲಿಟ್ಟು ಬಿಸಿ ಮಾಡಿ, ಪಲ್ಯ ಮಾಡಿ, ಚಪಾತಿ ಮಾಡಿ ಹಾಟ್‌ಕೇಸ್‌ಗೆ ಹಾಕಿದಳು. ಅವಳು ಪ್ರೇಮಾಳಿಗೆ ಫೋನ್ ಮಾಡಿದಾಗ ಅವಳ ಕಾರು ಕೆಂಗೇರಿ ದಾಟಿತ್ತು.

ಪ್ರೇಮಾ ಮನೆಗೆ ಬರುವಾಗಲೇ, ‘‘ಭುವನಾ ಗುಡ್‌ನ್ಯೂಸ್’’ ಎಂದುಕೊಂಡೇ ಬಂದಳು.

‘‘ಅಮ್ಮಾ, ಆಂಟಿ ಈ ಕಾಗದ ಕೊಟ್ಟು, ಕಿಟ್‌ಬ್ಯಾಗ್ ತೆಗೆದುಕೊಂಡು ಹೊರಟು ಹೋದರು.’’

ಪ್ರೇಮಾ ಆತುರದಿಂದ ಪತ್ರ ಬಿಚ್ಚಿದಳು.

ಪ್ರೀತಿಯ ಪ್ರೇಮಾ,

ನನ್ನನ್ನು ಕ್ಷಮಿಸು. ನಾನು ನನ್ನ ದಾರಿ ಆರಿಸಿಕೊಂಡಿದ್ದೇನೆ. ಅದೃಷ್ಟವಿದ್ದರೆ ಪುನಃ ಭೇಟಿಯಾಗೋಣ.

ನಿನ್ನ

ಭುವನಾ

ಅವಳು ಪತ್ರ ನೋಡಿ ದೊಡ್ಡದಾಗಿ ಉಸಿರೆಳೆದುಕೊಂಡಳು.


**ಸಿ.ಎನ್. ಮುಕ್ತಾ**

ಪ್ರೌಢಶಾಲಾ ಮುಖ್ಯಶಿಕ್ಷಕಿಯಾಗಿ ನಿವೃತ್ತರಾಗಿರುವ ಸಿ.ಎನ್. ಮುಕ್ತಾ ಮೈಸೂರು ನಿವಾಸಿ. ನಾಲ್ಕು ದಶಕಗಳಿಂದ ಕಾದಂಬರಿ, ಕತೆ, ಪ್ರಬಂಧ, ಮಕ್ಕಳ ಸಾಹಿತ್ಯ, ಶೈಕ್ಷಣಿಕ ಲೇಖನಗಳ ರಚನೆಯಲ್ಲಿ ತೊಡಗಿಸಿಕೊಂಡಿರುವ ಲೇಖಕಿ. ಸಮಾನಮನಸ್ಕರೊಡನೆ ಸೇರಿ ‘ಸ್ನೇಹಬಳಗ’ ಸ್ಥಾಪಿಸಿ, ಕರ್ನಾಟಕ ಲೇಖಕಿಯರ ಕತೆ, ಕವನ, ಮಕ್ಕಳ ಸಾಹಿತ್ಯ, ಅನುವಾದಿತ ಕತೆಗಳನ್ನು ಸಂಪಾದಿಸಿ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಅನೇಕ ಕಾದಂಬರಿಗಳು ದೂರದರ್ಶನ ಧಾರಾವಾಹಿಗಳು, ಚಲನಚಿತ್ರಗಳು ಆಗಿವೆ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಇವರ ಕಾದಂಬರಿ, ಕತೆಗಳು, ಪ್ರಬಂಧಗಳು ಬೆಳಕು ಕಂಡಿವೆ.